14)	ಬೆಳಗಾಂ	722
15)	ಬಿಜಾಪುರ	576
16)	ಧಾರವಾಡ	1213
17)	ಉತ್ತರ ಕನ್ನಡ	385
18)	ಗುಲ್ಬರ್ಗಾ	404
19)	ಬೀದರ್	595
20)	ರಾಯಚೂರು	310
21)	ಬಳ್ಳಾರಿ	495
		9974

ಅ) ಡಿ.ಪಿ.ಇ.ಪಿ ಅಡಿಯಲ್ಲಿಯ ಮಂಜೂರಾದ ಹುದ್ದೆಗಳು (ಮಂಡ್ಯ - 60, ಕೋಲಾರ -60, ರಾಯಚೂರು ಮತ್ತು ಬೆಳಗಾಂ) 530

ಆ) 1995-96ನೇ ಸಾಲಿನಲ್ಲಿ ಮಂಜೂರಾದ ಹುದ್ದೆಗಳು 5000

ಇ) 5 ಮತ್ತು 6ನೇ ಹಂತಗಳ ಕಪ್ಪುಹಲಗೆ

ಕಾರ್ಯಾಚರಣೆಯಡಿಯಲ್ಲಿ ಮಂಜೂರಾದ ಹುದ್ದೆಗಳು 3196

ಒಟ್ಟು ಹುದ್ದೆಗಳು 18700

ಅರಣ್ಯ ಇಲಾಖೆ ಬೆಳೆಸಿದ ನೀಲಗಿರಿ ಮರಗಳು

897 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಅರಣ್ಯ ಇಲಾಖೆ ಬೆಳೆಸಿದ ನೀಲಗಿರಿ ಮರಗಳು ದೊಡ್ಡ ಪ್ರಮಾಣದಲ್ಲಿ ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರಣ್ಯ ಇಲಾಖೆಯ ಈ ನೀಲಗಿರಿ ತೋಪುಗಳನ್ನು ಅದರ ನಿರ್ವಹಣೆಯನ್ನು ಪಂಚಾಯಿತಿಯ ಚಟುವಟಿಕೆಗಾಗಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುವ ಯಾವುದಾದರೂ ಪ್ರಸ್ತಾವನೆ ಇದೆಯೆ?

ಇ) ಇಲ್ಲದಿದ್ದಲ್ಲಿ ಅರಣ್ಯ ಆಸ್ತಿಯನ್ನು ರಕ್ಷಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಕ್ರೀಡಾಂಗಣಗಳು

899 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು?

ಆ) ತಾಲ್ಲೂಕು ಮಟ್ಟದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆ ಎಷ್ಟು?

ಇ) ಹಾಗಿದ್ದಲ್ಲಿ ಇರುವ ಅವಶ್ಯಕತೆ ಎಷ್ಟು?

ಶ್ರೀ ಅಜಯ ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲಿಯವರೆಗೆ 91 ಕ್ರೀಡಾಂಗಣಗಳನ್ನು ರಾಜ್ಯದಲ್ಲಿ ನಿರ್ಮಾಣ ಮಾಡಲು ಸರ್ಕಾರದಿಂದ ಆಡಳಿತಾತ್ಮಕ ಮಾಂಜೂರಾತಿಯನ್ನು ನೀಡಿದೆ - ವಿವರ ಈ ಕೆಳಕಂಡಂತೆ ಇದೆ :

1)	ಜಿಲ್ಲಾ ಮಟ್ಟದ ಕ್ರೀಡಾಂಗಣ	18
2)	ತಾಲ್ಲೂಕು ಮಟ್ಟದ ಕ್ರೀಡಾಂಗಣ	73

ಇಲ್ಲಿಯವರೆಗೆ 17 ಜಿಲ್ಲಾ ಮಟ್ಟದ ಕ್ರೀಡಾಂಗಣ ಪೂರ್ಣಗೊಂಡಿದ್ದು, 73 ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣ ಪ್ರಗತಿಯಲ್ಲಿದೆ.

ಆ) 73 ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ನಿರ್ಮಾಣ ಪ್ರಗತಿಯಲ್ಲಿವೆ.

ಇ) ಇನ್ನು 84 ತಾಲ್ಲೂಕು ಮಟ್ಟ ಕ್ರೀಡಾಂಗಣಗಳ ಅವಶ್ಯಕತೆ ಇದೆ.

ಖಾಸಗಿ ಮೆಡಿಕಲ್ ಕಾಲೇಜುಗಳು ಸ್ವಂತ ಆಸ್ಪತ್ರೆಗಳನ್ನು ಹೊಂದಿರುವ ಬಗ್ಗೆ

901 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಖಾಸಗೀ ಮೆಡಿಕಲ್ ಕಾಲೇಜುಗಳು ಅವರದೇ ಆದ ಆಸ್ಪತ್ರೆಗಳನ್ನು ಹೊಂದಿದೆಯೇ?

ಆ) ಇಲ್ಲವಾದರೆ ಅಂತಹ ಕಾಲೇಜುಗಳ ಮೇಲೆ ಕೈಗೊಂಡ ಕ್ರಮಗಳೇನು?

ಇ) ಈಗ ಯಾವ ಆಸ್ಪತ್ರೆಗಳನ್ನು ಯಾವ ಕಾಲೇಜು ಉಪಯೋಗಿಸುತ್ತಿವೆ.